Re. No. D. 221

It contains the text of 10 Acts (Kannada

# भारत का राजपत्र
# The Gazette of India
# ಭಾರತ ರಾಜ ಪತ್ರ

**( EXTRAORDINARY )**

( ವಿಶೇಷ ಸಂಚಿಕೆ )

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

प्राधिकार से प्रकाशित

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.


| | | | |
|---|---|---|---|
| सं. १ | नई दिल्ली, सोमवार, नवेंबर १६, २००९ | कार्तीक २५, १९३१ (शका) | खंड. ४१ |
| No. 1 | New Delhi, Monday, November 16, 2009 | Karthika 25, 1931 (Saka) | Vol. 41 |
| ಸಂ. ೧ | ನವ ದೆಹಲಿ, ಸೋಮವಾರ, ನವೆಂಬರ್ ೧೬, ೨೦೦೯ | ಕಾರ್ತೀಕ ೨೫, ೧೯೩೧ (ಶಕ) | ಸಂಪುಟ. ೪೧ |


**Ministry of Law and Justice**

(Legislative Department)

New Delhi, 16th November, 2009

ಕಾನೂನು ಮತ್ತು ನ್ಯಾಯ ಮಂತ್ರಾಲಯ

(ವಿಧಾಯೀ ಇಲಾಖೆ)

ನವದೆಹಲಿ, 16ನೇ ನವೆಂಬರ್, 2009

The Translation in Kannada of the following Acts, namely :- (1) The Petroleum Act, 1934 (2) The Election Commission (Conditions of Service of Election Commissioners and Transaction of Business) Act, 1991 (3) The National Commission for Backward Classes Act, 1993 (4) The Lotteries (Regulation) Act, 1998 (5) The Advocates' Welfare Fund Act, 2001 (6) The Indian Council of World Affairs Act, 2001 (7) The Delimitation Act, 2002 (8) The Cigarettes and Other Tobacco Products (Prohibition of Advertisement and Regulation of Trade and Commerce, Production, Supply and Distribution) Act, 2003 (9) The Protection of Women from Domestic Violence Act, 2005 (10) The Prohibition of Child Marriage Act, 2006 - are hereby published under the authority of the President and shall be deemed to be authoritative texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು, ಎಂದರೆ :- (1) ಪೆಟ್ರೋಲಿಯಂ ಅಧಿನಿಯಮ, 1934 (2) ಚುನಾವಣಾ ಆಯೋಗ (ಚುನಾವಣಾ ಆಯುಕ್ತರುಗಳ ಸೇವಾ ಷರತ್ತುಗಳು ಮತ್ತು ವ್ಯವಹಾರ ನಿರ್ವಹಣೆ) ಅಧಿನಿಯಮ, 1991 (3) ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1993 (4) ಲಾಟರಿಗಳ (ವಿನಿಯಮನ) ಅಧಿನಿಯಮ, 1998 (5) ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 2001 (6) ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತು ಅಧಿನಿಯಮ, 2001 (7) ಸೀಮಾ ನಿರ್ಣಯ ಅಧಿನಿಯಮ, 2002 (8) ಸಿಗರೇಟುಗಳ ಮತ್ತು ಇತರ ತಂಬಾಕು ಉತ್ಪನ್ನಗಳ (ಜಾಹೀರಾತು ನಿಷೇಧ ಮತ್ತು ವ್ಯಾಪಾರ ಮತ್ತು ವಾಣಿಜ್ಯ, ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಯಮನ) ಅಧಿನಿಯಮ, 2003 (9) ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 (10) ಬಾಲ್ಯ ವಿವಾಹ ನಿಷೇಧ ಅಧಿನಿಯಮ, 2006 – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಲಾಟರಿಗಳ (ವಿನಿಯಮನ) ಅಧಿನಿಯಮ, 1998

## (1998ರ ಅಧಿನಿಯಮ ಸಂಖ್ಯೆ 17)

[7ನೇ ಜುಲೈ, 1998]

ಲಾಟರಿಗಳನ್ನು ವಿನಿಯಮಿಸುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ನಲವತ್ತೊಂಬತ್ತನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಲಾಟರಿಗಳ (ವಿನಿಯಮನ) ಅಧಿನಿಯಮ, 1998 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು 1997ರ ಅಕ್ಟೋಬರ್ 2 ರಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. **ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ವಿಷಯಕ್ಕೆ ಮತ್ತು ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,-

(ಎ) "ಲಾಟರಿಯ ಬಂಪರ್ ಡ್ರಾ" ಎಂದರೆ ಲಾಟರಿಗಳ ಇತರ ಸಾಮಾನ್ಯ ಡ್ರಾ ಸಂದರ್ಭದಲ್ಲಿ ನೀಡುವ ಬಹುಮಾನದ ಹಣಕ್ಕಿಂತಲೂ ಹೆಚ್ಚಿನ ಬಹುಮಾನದ ಹಣವನ್ನು ನೀಡುವಂತಹ ಯಾವುದೇ ಹಬ್ಬದ ದಿನದಂದು ಅಥವಾ ಹಬ್ಬದ ಅವಧಿಯಲ್ಲಿ ಅಥವಾ ಇತರ ವಿಶೇಷ ಸಂದರ್ಭದಲ್ಲಿ ನಡೆಸುವ ಲಾಟರಿಯ ವಿಶೇಷ ಡ್ರಾ ಎಂದು ಅರ್ಥ;

(ಬಿ) "ಲಾಟರಿ" ಎಂದರೆ ಟಿಕೆಟ್ಟುಗಳನ್ನು ಖರೀದಿಸುವ ಮೂಲಕ ಬಹುಮಾನದ ಅದೃಷ್ಟದ ಆಯ್ಕೆಗಳಲ್ಲಿ ಭಾಗವಹಿಸುವಂತಹ ವ್ಯಕ್ತಿಗಳಿಗೆ, ಚೀಟಿ ಎತ್ತುವ ಮೂಲಕ ಅಥವಾ ಅದೃಷ್ಟದಿಂದ ದೊರೆಯುವ ಬಹುಮಾನಗಳನ್ನು ಹಂಚುವುದಕ್ಕಾಗಿನ ಯಾವುದೇ ರೀತಿಯ ಮತ್ತು ಯಾವುದೇ ಹೆಸರಿನಿಂದ ಕರೆಯಲಾಗುವ ಒಂದು ಯೋಜನೆ ಎಂದು ಅರ್ಥ;

(ಸಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು ಎಂದು ಅರ್ಥ.

3. **ಲಾಟರಿಗಳ ನಿಷೇಧ.**- 4ನೇ ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿದುದನ್ನು ಹೊರತುಪಡಿಸಿ ಯಾವುದೇ ರಾಜ್ಯ ಸರ್ಕಾರವು ಯಾವುದೇ ಲಾಟರಿಯನ್ನು ಸಂಘಟಿಸತಕ್ಕದ್ದಲ್ಲ, ನಡೆಸತಕ್ಕದ್ದಲ್ಲ ಅಥವಾ ಉತ್ತೇಜಿಸತಕ್ಕದ್ದಲ್ಲ.

4. **ಯಾವ ಷರತ್ತುಗಳಿಗೆ ಒಳಪಟ್ಟು ಲಾಟರಿಗಳನ್ನು ಸಂಘಟಿಸಬಹುದೋ ಆ ಷರತ್ತುಗಳು, ಇತ್ಯಾದಿಗಳು.**- ಒಂದು ರಾಜ್ಯ ಸರ್ಕಾರವು, ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಲಾಟರಿಯನ್ನು ಸಂಘಟಿಸಬಹುದು, ನಡೆಸಬಹುದು ಅಥವಾ ಉತ್ತೇಜಿಸಬಹುದು, ಎಂದರೆ:-

(ಎ) ಬಹುಮಾನಗಳನ್ನು ಯಾವುದೇ ಪೂರ್ವ ಪ್ರಕಟಿತ ಸಂಖ್ಯೆಯ ಮೇಲೆ ಅಥವಾ ಒಂದಂಕಿ ಆಧಾರದ ಮೇಲೆ ನೀಡತಕ್ಕದ್ದಲ್ಲ;

(ಬಿ) ರಾಜ್ಯ ಸರ್ಕಾರವು ಲಾಟರಿ ಟಿಕೆಟ್ಟಿನ ಅಧಿಕೃತತೆಯನ್ನು ಸುನಿಶ್ಚಿತಗೊಳಿಸಿಕೊಳ್ಳುವಂತಹ ರೀತಿಯಲ್ಲಿ ರಾಜ್ಯದ ಅಂಕಿತ ಮತ್ತು ಲಾಂಛನವಿರುವ ಲಾಟರಿ ಟಿಕೆಟ್ಟುಗಳನ್ನು ಮುದ್ರಿಸತಕ್ಕದ್ದು;

(ಸಿ) ರಾಜ್ಯ ಸರ್ಕಾರವು ತಾನೇ ಆಗಲಿ ಅಥವಾ ವಿತರಕರ ಅಥವಾ ಮಾರಾಟ ಏಜೆಂಟರ ಮೂಲಕವಾಗಿಯಾಗಲಿ ಟಿಕೆಟ್ಟುಗಳನ್ನು ಮಾರಾಟ ಮಾಡತಕ್ಕದ್ದು;

(ಡಿ) ಲಾಟರಿ ಟಿಕೆಟ್ಟುಗಳ ಮಾರಾಟದಿಂದ ಬಂದ ಉತ್ಪತ್ತಿಯನ್ನು ರಾಜ್ಯದ ಸರ್ಕಾರಿ ಲೆಕ್ಕಕ್ಕೆ ಜಮೆ ಮಾಡತಕ್ಕದ್ದು;

(ಇ) ರಾಜ್ಯ ಸರ್ಕಾರವು ಎಲ್ಲಾ ಲಾಟರಿಗಳ ಡ್ರಾಗಳನ್ನು ತಾನೇ ನಡೆಸತಕ್ಕದ್ದು;

(ಎಫ್) ರಾಜ್ಯ ಸರ್ಕಾರವು ನಿಯಮಿಸಬಹುದಾದಂತಹ ಅವಧಿಯೊಳಗೆ ಕ್ಲೇಮು ಮಾಡದಿರುವ ಅಥವಾ ಇತರ ರೀತಿಯಲ್ಲಿ ವಿತರಿಸದೇ ಇರುವ ಬಹುಮಾನದ ಹಣವು ಆ ಸರ್ಕಾರದ ಸ್ವತ್ತಾಗತಕ್ಕದ್ದು;

(ಜಿ) ಡ್ರಾ ಮಾಡಬೇಕಾದ ಸ್ಥಳವು ಸಂಬಂಧಪಟ್ಟ ರಾಜ್ಯದೊಳಗಿರತಕ್ಕದ್ದು;

(ಹೆಚ್) ಯಾವುದೇ ಲಾಟರಿಯು ಒಂದು ವಾರದಲ್ಲಿ ಒಂದಕ್ಕಿಂತ ಹೆಚ್ಚಿನ ಡ್ರಾಗಳನ್ನು ಹೊಂದಿರತಕ್ಕದ್ದಲ್ಲ;

(ಐ) ಎಲ್ಲಾ ಬಗೆಯ ಲಾಟರಿಗಳ ಡ್ರಾಗಳನ್ನು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ದಿನದ ಅವಧಿಯ ಮಧ್ಯದಲ್ಲಿ ನಡೆಸತಕ್ಕದ್ದು;

(ಜೆ) ಲಾಟರಿಯ ಬಂಪರು ಡ್ರಾಗಳ ಸಂಖ್ಯೆಯು ಒಂದು ಕ್ಯಾಲೆಂಡರ್ ವರ್ಷದಲ್ಲಿ ಆರಕ್ಕಿಂತ ಹೆಚ್ಚಾಗಿರತಕ್ಕದ್ದಲ್ಲ;

(ಕೆ) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಇತರ ಷರತ್ತುಗಳು.

5. **ಒಂದು ರಾಜ್ಯದಲ್ಲಿ ಟಿಕೆಟ್ ಮಾರಾಟದ ನಿಷೇಧ.–** ಒಂದು ರಾಜ್ಯ ಸರ್ಕಾರವು, ಆ ರಾಜ್ಯದೊಳಗಡೆ, ಇತರ ಪ್ರತಿಯೊಂದು ರಾಜ್ಯವು ಸಂಘಟಿಸುವ, ನಡೆಸುವ ಅಥವಾ ಉತ್ತೇಜಿಸುವ ಲಾಟರಿ ಟಿಕೆಟ್ಟುಗಳ ಮಾರಾಟವನ್ನು ನಿಷೇಧಿಸಬಹುದು.

6. **ಲಾಟರಿಯ ಸಂಘಟನೆ ಇತ್ಯಾದಿಯ ನಿಷೇಧ.–** ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ 4ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಸಂಘಟಿಸುವ, ನಡೆಸುವ ಅಥವಾ ಉತ್ತೇಜಿಸುವ ಲಾಟರಿಯನ್ನು ಅಥವಾ 5ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಮಾರಾಟ ಮಾಡುವ ಲಾಟರಿ ಟಿಕೆಟ್ಟುಗಳನ್ನು ನಿಷೇಧಿಸಬಹುದು.

7. **ದಂಡನೆ.–** ಈ ಅಧಿನಿಯಮವು ರಾಷ್ಟ್ರಪತಿಯ ಅನುಮೋದನೆಯನ್ನು ಪಡೆದ ದಿನಾಂಕದ ತರುವಾಯ, ರಾಜ್ಯ ಸರ್ಕಾರದ ಯಾವುದೇ ಇಲಾಖೆಯು ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಲಾಟರಿಯನ್ನು ಸಂಘಟಿಸಿದರೆ, ನಡೆಸಿದರೆ ಅಥವಾ ಉತ್ತೇಜಿಸಿದರೆ, ಆ ಇಲಾಖೆಯ ಮುಖ್ಯಸ್ಥನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಆ ಉಲ್ಲಂಘನೆಯನ್ನು ತನಗೆ ತಿಳಿಯದಂತೆ ಮಾಡಲಾಗಿದೆಯೆಂದು ಅಥವಾ ಅಂಥ ಉಲ್ಲಂಘನೆ ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತವಾದ ಎಲ್ಲಾ ಯುಕ್ತ ಶ್ರದ್ಧೆ ವಹಿಸಿದ್ದೆನೆಂದು ಅವನು ರುಜುವಾತುಪಡಿಸಿದರೆ, ಅಂಥ ಇಲಾಖಾ ಮುಖ್ಯಸ್ಥನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಉಲ್ಲಂಘನೆಯನ್ನು ಸರ್ಕಾರದ ಇಲಾಖೆಯು ಮಾಡಿರುವಲ್ಲಿ ಮತ್ತು ಆ ಉಲ್ಲಂಘನೆಯು ಇಲಾಖೆಯ ಮುಖ್ಯಸ್ಥನನ್ನು ಹೊರತುಪಡಿಸಿ, ಯಾರೇ ಅಧಿಕಾರಿಯ ಸಮ್ಮತಿಯಿಂದ ಇಲ್ಲವೇ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ಯಾವುದೇ ನಿರ್ಲಕ್ಷತೆಯ ಕಾರಣದಿಂದ ನಡೆದಿದೆಯೆಂದು ಹೇಳಬಹುದಾದಲ್ಲಿ, ಅಂಥ ಅಧಿಕಾರಿಯನ್ನು ಆ ಉಲ್ಲಂಘನೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಆತನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

(3) ಯಾರೇ ವ್ಯಕ್ತಿಯು, ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಸಂಘಟಿಸಿದ, ನಡೆಸಿದ ಅಥವಾ ಉತ್ತೇಜಿಸಿದ ಯಾವುದೇ ಲಾಟರಿಯ ಏಜೆಂಟನಾಗಿ ಅಥವಾ ಉತ್ತೇಜಕನಾಗಿ ಅಥವಾ ವ್ಯಾಪಾರಿಯಾಗಿ ಕಾರ್ಯ ನಿರ್ವಹಿಸಿದರೆ ಅಥವಾ ಅಂಥ ಲಾಟರಿ ಟಿಕೆಟ್ಟನ್ನು ಮಾರಾಟ ಮಾಡಿದರೆ, ವಿತರಣೆ ಮಾಡಿದರೆ ಅಥವಾ ಖರೀದಿ ಮಾಡಿದರೆ, ಆತನು,

ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**8. ಅಪರಾಧಗಳು ಸಂಜ್ಞೇಯವಾದವುಗಳು ಮತ್ತು ಜಾಮೀನೀಯವಲ್ಲದವುಗಳು ಆಗಿರತಕ್ಕದ್ದು.**– ಈ ಅಧಿನಿಯಮದ ಮೇರೆಗಿನ ಅಪರಾಧವು ಸಂಜ್ಞೇಯವಾದುದು ಮತ್ತು ಜಾಮೀನೀಯವಲ್ಲದ್ದೂ ಆಗಿರತಕ್ಕದ್ದು.

**9. ಕಂಪನಿಗಳಿಂದ ಅಪರಾಧಗಳು.**– (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಅಪರಾಧವು ನಡೆದ ಕಾಲದಲ್ಲಿ ಕಂಪನಿಯ ಪ್ರಭಾರವನ್ನು ಹೊಂದಿದ್ದ ಮತ್ತು ಆ ಕಂಪನಿಯ ವ್ಯವಹಾರವನ್ನು ನಡೆಸುವ ಬಗ್ಗೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅವನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಯಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅವನು ರುಜುವಾತುಪಡಿಸಿದರೆ, ಅಂಥ ವ್ಯಕ್ತಿಯನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಕಂಪನಿಯ ಯಾವನೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಇಲ್ಲವೇ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವರ ಯಾವುದೇ ನಿರ್ಲಕ್ಷ್ಯತೆಯ ಕಾರಣದಿಂದ ನಡೆಯಿತೆಂದು ಆರೋಪಿಸಬಹುದಾಗಿರುವಲ್ಲಿ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

**ವಿವರಣೆ:**– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಇದು ಫರ್ಮ್ ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮ್‌ಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ ಫರ್ಮಿನ ಒಬ್ಬ ಪಾಲುದಾರ.

**10. ನಿರ್ದೇಶನಗಳನ್ನು ಕೊಡಲು ಅಧಿಕಾರ.**– ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಮಾಡಿದ ಆದೇಶವನ್ನು ರಾಜ್ಯದಲ್ಲಿ ಕಾರ್ಯಗತಗೊಳಿಸುವ ಬಗ್ಗೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ನಿರ್ದೇಶನಗಳನ್ನು ಕೊಡಬಹುದು.

**11. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.**– (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತ ಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಸಂದರ್ಭಾನುಸಾರ ಆ ನಿಯಮವು ಆ ತರುವಾಯ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ

ಪರಿಣಾಮಕಾರಿಯಾಗತಕ್ಕದ್ದಲ್ಲ; ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವುಂಟು ಮಾಡತಕ್ಕದ್ದಲ್ಲ.

12. **ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.**– (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಅಂಥ ನಿಯಮಗಳು ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವುಂಟಾಗದಂತೆ ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 4ನೇ ಪ್ರಕರಣದ (ಎಫ್) ಖಂಡದ ಮೇರೆಗೆ ಬಹುಮಾನದ ಹಣವನ್ನು ಕ್ಲೇಮು ಮಾಡುವುದಕ್ಕಾಗಿ ಅವಧಿಯನ್ನು ನಿಗದಿಪಡಿಸುವುದು;

(ಬಿ) 4ನೇ ಪ್ರಕರಣದ (ಐ) ಖಂಡದ ಮೇರೆಗೆ ಎಲ್ಲಾ ಲಾಟರಿಗಳ ಡ್ರಾಗಳಿಗೆ ಅವಧಿಯನ್ನು ನಿಗದಿಪಡಿಸುವುದು; ಮತ್ತು

(ಸಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುವೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲವು ಎರಡು ಸದನಗಳನ್ನು ಹೊಂದಿರುವಲ್ಲಿ, ಪ್ರತಿಯೊಂದು ಸದನದ ಮುಂದೆ ಅಥವಾ ಅಂಥ ವಿಧಾನ ಮಂಡಲದ ಒಂದೇ ಸದನವಿರುವಲ್ಲಿ, ಆ ಸದನದ ಮುಂದೆ ಇರಿಸತಕ್ಕದ್ದು.

13. **ನಿರಸನ ಮತ್ತು ಉಳಿಸುವಿಕೆ.**– (1) ಲಾಟರಿಗಳ (ವಿನಿಯಮನ) ಅಧ್ಯಾದೇಶ, 1998ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದರೂ, ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

* * * * *